MVC No. 242/2023 – –

PW – 1

ದಿನಾಂಕಃ 17.06.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದ –</u>

ಅಪಘಾತವಾದ ಸಮಯದಲ್ಲಿ ಶ್ರೀ ರಂಗನಾಥ ಪೌಢ ಶಾಲೆ, ಆಲೂರುಹಟ್ಟಿಯಲ್ಲಿ 10 ನೇ ತರಗತಿ ವ್ಯಾಸಂಗ ಮಾಡುತ್ತಿದ್ದೆ. ನಿಪಿ–2 ದಾಖಲಾತಿಯನ್ನು ಶಾಲೆಯಲ್ಲಿ ನಾನೇ ಹೇಳಿ ಬರೆಸಿರುತ್ತೇನೆ. ನಿಪಿ–2 ರಲ್ಲಿರುವ ದಾಖಲೆಗಳನ್ನು ಸಂಬಂದಪಟ್ಟ ಇಲಾಖೆಗೆ ಒದಗಿಸಿರುತ್ತೇನೆ ಎಂದರೆ ಸರಿ. ನಿಪಿ–2 ರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಎಂದರೆ ಸರಿ. ತುಪ್ಪದ ಹಳ್ಳಿಯಿಂದ ಅಣಜಿಗೆ ಬರಬೇಕಾದರೆ ರಸ್ತೆ ಹೊಂದಿಕೊಂಡಂತೆ ಒಂದು ಬೋರ್ ವೆಲ್ ಇದೆ ಎಂದರೆ ಸರಿ. ಸದರಿ ಅಪಘಾತವು ಬೋರ್ ವೆಲ್ ಬಳಿ ಆಗಿದೆ ಎಂದರೆ ಸರಿ. ನಾನು ಚಲಿಸುತ್ತಿದ್ದ ಬಸ್ಸು ಬೋರ್ ವೆಲ್ ಗೆ ತಾಗುವುದನ್ನು ತಪ್ಪಿಸುವ ಸಲುವಾಗಿ ಸ್ವಲ್ಪ ಬಲಕ್ಕೆ ಬಸ್ಸನ್ನು ತೆಗೆದುಕೊಂಡರು ಎಂದರೆ ಸರಿ. ಸದರಿ ಬಸ್ಸನ್ನು ಬಲಕ್ಕೆ ತೆಗೆದುಕೊಂಡ ಪರಿಣಾಮ ಬಸ್ಸು ಟ್ರಾಲಿಗೆ ತಾಗಿ ಈ ಅಪಘಾತವಾಗಿದೆ ಎಂದರೆ ಸರಿ. ನಾನು ಮೇಲೆ ಹೇಳಿದ ರೀತಿ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ. ಸದರಿ ಅಪಘಾತವು ಶಾಲಾ ಆವರಣದಲ್ಲಿ ಆಗದ ಕಾರಣ ನಾನು ಕೋರಿದಂತೆ ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ಶಾಲೆಯವರು ಹಿಂಬರಹ ನೀಡಿರುತ್ತಾರೆ.

ಸದರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಎಂ ವಿ ಸಿ ನಂ. 133/2020 ರ ಅರ್ಜಿಯ ಪ್ರತಿಯನ್ನು ಸಾಕ್ಷಿಗೆ ತೋರಿಸುತಿದು ಸಾಕ್ಷಿ ಅದನ್ನು ಗುರುತಿಸಿದ ಮೇರೆಗೆ ಅದನ್ನು ನಿಆರ್–1 ಎಂದು ಗುರುತಿಸಲಾಯಿತು. ಸದರಿ ಅರ್ಜಿಯಲ್ಲಿ ನಾನು ಸಲ್ಲಿಸಿದ ಮುಖ್ಯ ವಿಚಾರಣೆಯ ದೃಡೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಆರ್–2 ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣೆಯಲ್ಲಿ ಕೆಎ 42 – 5346 ನೊಂದಣಿಯ ಬಸ್ಸಿನ ನಿರ್ಲಕ್ಷತನದಿಂದ ಅಪಘಾತವಾಗಿದೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ